M.V.C .NO. 1127/2020
PW–1
dated: 05–05–2025.

ಮಧ್ಯಂತರ ಅರ್ಜಿ ನಂ. 3 ರ ಮೇಲೆ ಆದ ಆದೇಶದಂತೆ ಸಾಕ್ಷಿಯನ್ನು ಈ ದಿನ ದಿನಾಂಕ 05–05–2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಪಾಟೀ ಸವಾಲುಃ 2 ನೇ ಎದುರುದಾರ ಪರವಾಗಿ ಶ್ರೀ ಆರ್ ಎಮ್ ಎನ್ ವಕೀಲರಿಂದಃ.

ಅಪಘಾತ ಸಮಯದಲ್ಲಿ ನನ್ನ ಮೋಟರ ಸೈಕಲ ಮೇಲೆ ಹೊಗುತ್ತಿದ್ದೇನು. ಸದರಿ ಮೋಟರ ಸೈಕಲ ನನ್ನದೇ ಎಂದು ತೊರಿಸಲು ಪೊಲಿಸರಿಗೆ ದಾಖಲೆಗಳನ್ನು ಕೊಟ್ಟಿರುತ್ತೇನೆ. ಅಪಘಾತ ಸಮಯದಲ್ಲಿ ಮೋಟರ ಸೈಕಲ ಓಡಿಸಲು ಚಾಲನಾ ಪರವಾನಿಗೆ ಇತ್ತು ಎಂದು ತೊರಿಸಲು ದಾಖಲೆ ಹಾಜರುಪಡಿಸಿರುತ್ತೇನೆ . ಪ್ರಸುತ್ತ ಪ್ರಕರಣದಲ್ಲಿ ನಾನು ಯಾವುದೇ ದಾಖಲೆ ಹಾಜರು ಮಾಡಿದ್ದ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮೋಟರ ಸೈಕಲಗೆ ಇನ್ಸೂರನ್ಸ ಇತ್ತು ಎಂದು ತೊರಿಸಲು ದಾಖಲೆ ಹಾಜರು ಮಾಡಿಲ್ಲ. ಅಪಘಾತ ಸಮಯದಲ್ಲಿ ನನ್ನ ಮೋಟರ ಸೈಕಲ ಗೆ ಇನ್ಸೂರನ್ಸ ಇರಲಿಲ್ಲ. ನಾನು ಡಿಎಲ್ ಇಲ್ಲದೇ ಮತ್ತು ಮೋಟರ ಸೈಕಲಗೆ ಇನ್ಸುರನ್ಸ ಮಾಡಿಸದೇ ಅಪಘಾತ ಸಮಯದಲ್ಲಿ ಮೋಟರ ಸೈಕಲ ಓಡಿಸುತ್ತಿದ್ದೇನು ಎಂದರೆ ಸಾಕ್ಷಿ ನನ್ನ ಡಿಎಲ್ ಇತ್ತು ಎಂದು ನಡಿದಿರುತ್ತಾರೆ. ಅಪಘಾತವು ನನ್ನ ತಪ್ಪಿನಿಂದ ಆಗಿದ್ದರೂ ಸಹ ಎದುರು ವಾಹನದ ಮೇಲೆ ಸುಳ್ಳು ದೂರು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ನಾನು ಓಡಿಸುತ್ತಿದ್ದ ಮೋಟರ ಸೈಕಲ ಮಾಲಿಕ ಮತ್ತು ವಿಮಾದಾರರರಿಗೆ ಪ್ರಸ್ತುತ ಪ್ರಕರಣದಲ್ಲಿ ಪಾರ್ಟಿ ಮಾಡದೇ ಕ್ಲೇಮ ಅರ್ಜಿ ಸಲ್ಲಿಸಿರುವುದು ಸರಿಯಲ್ಲ ಎಂದರೆ ಸರಿಯಲ್ಲ. 2 ನೇ ಎದುರುದಾರರಿಗೆ ಯಾವ ಆಧಾರದ ಮೇಲೆ ಪಕ್ಷಗಾರರನ್ನಾಗಿ ಮಾಡಿದ್ದೀರಿ ಎಂದರೆ ನಾನು ಶಾಲೆ ಕಲಿತಿಲ್ಲ, ನನಗೆ ಅರ್ಥಆಗುವುದಿಲ್ಲ ಎಂದು ನುಡಿದಿರುತ್ತಾರೆ. ನಾನು ಹಾಜರುಪಡಿಸಿದ ಪಾಲಸಿಯ ಜರಾಕ್ಸ ಪ್ರತಿ 2 ನೇ ಎದುರುದಾರ ವಿಮಾ ಕಂಪನಿಗೆ

ಸಂಬಂದಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ವಿಮಾ ಪಾಲಸಿಯ ಜರಾಕ್ಸ ಪ್ರತಿ ಎಜೆಂಟರ ಹೆಸರು ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಪಾಲಸಿಯಲ್ಲಿ ಶೆನೈ ಪ್ರಸಾದ 2 ನೇ ಎದುರುದಾರ ವಿಮಾ ಕಂಪನಿ ಬಿಟ್ಟು 10 ವರ್ಷ ಆಗಿರುತ್ತದೆ ಎಂದರೆ ಸರಿಯಲ್ಲ. 10 ವರ್ಷದಿಂದ ಇಚೆಗೆ ಮಲಪಾದೇವಿ ಮಹಾರಾಣಾ ಎಂಬುವವರು ಅಥರೈಸಡ ಸಿಗ್ನಟರಿ ಆಗಿರುತ್ತಾರೆ ಎಂದರೆ ಸರಿಯಲ್ಲ. ನಾನು ಹಾಜರುಪರಿಸಿದ ವಿಮಾ ಕಂಪನಿಯ ಜರಾಕ್ಸ ಪ್ರತಿಯಲ್ಲಿ ವಿಮಾ ಕಂಪನಿಯ 10 ವರ್ಷದ ಹಿಂದಿನ ಹಳೆಯ ವಿಳಾಸ ಬರೆದಿರುತ್ತದೆ ಎಂದರೆ ಸರಿಯಲ್ಲ. ಈ ಕುರಿತು ನಾವು ಸಂಬಂದಿಸಿದ ಬೆಳಗಾವಿ ಎಸ್ ಪಿ ಮತ್ತು ಪೊಲಿಸ ಠಾಣೆಯವರಿಗೆ ನಮ್ಮ ವಿಮಾ ಕಂಪನಿಯಿಂದ ನೊಟಿಸು ಕಳುಹಿಸಿರುತ್ತೇವೆ ಎಂದರೆ ಗೊತ್ತಿಲ್ಲ. ಅದೇ ರಿತಿ 1 ನೇ ಎದುರುದಾರನಿಗೂ ಸಹ ಪಾಲಸಿ ಹಾಜರುಪಡಿಸಲು ನೊಟಿಸು ಕಳುಹಿಸಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ. ಸದರಿ ನೊಟಿಸಿಗೆ 1 ನೇ ಎದುರುದಾರ ಯಾವುದೇ ಪ್ರತಿ ಉತ್ತರ ನೀಡಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಹೀಗಾಗಿ ನಾನು ಹೇಳುತ್ತಿರುವ ಪಾಲಸಿ ಅಸ್ತಿತ್ವದಲ್ಲಿ ಇಲ್ಲದೆ ಇರುವುದರಿಂದ ನಮ್ಮ ವಿಮಾ ಕಂಪನಿಯವರು ಯಾವೋ ಪರಿಹಾರ ಹಣ ಕೊಡಲು ಬಾದ್ಯಸ್ತ ಇರುವುದಿಲ್ಲ ಎಂದರೆ ಸರಿಯಲ್ಲ.

ಅಪಘಾತ ಆದ ತಕ್ಷಣ ಮಹಾಂತ ಶೆಟ್ಟಿ ಆಸ್ಪತ್ರೆಗೆ ಹೊದೇನು. ಅಲ್ಲಿ ಒಂದು ದಿನ ದಾಖಲಿದ್ದು ನಂತರ ಅಲ್ಲಿಂದ ಹಿರೇ ಬಾಗೇವಾಡಿಯ ನನ್ನ ಮನೆಯಲ್ಲಿ 8 ದಿನ ಇದ್ದು ನಂತರ ಲೇಕವಿವ ಆಸ್ಪತ್ರೆಗೆ ಹೊಗಿ ದಾಖಲಾಗಿದ್ದೇನೆ. ನಾನು ಲೆಕವಿವ ಆಸ್ಪತ್ರೆಗೆ ಹೊಗಿ ದಾಖಲಾಗಿದ್ದೇನೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಅದೇ ರೀತಿ ಉಪಚಾರ ಕುರಿತು ರೂ. 50 ಸಾವಿರ ಖರ್ಚು ಮಾಡಿದ್ದೇನೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಮುಂದುವರೆದ ಚಿಕಿತ್ಸೆ ಕುರಿತು

ರೂ. 50 ಸಾವಿರ ಮತ್ತು ನಿರಂತರ ಚಿಕಿತ್ಸೆಗೆ ತಿಂಗಳಿಗೆ ರೂ. 5 ಸಾವಿರ ಖರ್ಚು ಮಾಡುತ್ತಿದ್ದೇನೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಅಡುಗೆ ಕೆಲಸ ಮಾಡಿ ನಾನು ತಿಂಗಳಿಗೆ ರೂ. 20 ಸಾವಿರ ಸಂಪಾದಿಸುತ್ತಿದ್ದೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ನನಗೆ ಅಡುಗೆ ಕೆಲಸ ಮಾಡಲು ಪರವಾನಿಗೆ ಆಗಲಿ ಅಥವಾ ಟ್ರೇನಿಂಗ ಪಡೆದಿಲ್ಲ. ಇನ್ನೂ ನನ್ನ ಕೆಲಸದಲ್ಲಿ ಅಬಿವೃದ್ದಿ ಮಾಡಿ ಪ್ರತಿ ತಿಂಗಳಿಗೆ ರೂ. 40 ಸಾವಿರ ಸಂಪಾದಿಸುತ್ತಿದ್ದೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ನಾನು ಹೇಳುತ್ತಿರುವಂತೆ ನನಗೆ ಯಾವುದೇ ಅಂಗ ನ್ಯೂನ್ಯತೆ ಉಂಟಾಗಿರುವುದಿಲ್ಲ ಎಂದರೆ ಸರಿಯಲ್ಲ. ಪರಿಹಾರ ಹಣ ಸಿಗಲಿ ಅಂತಾ ಅಂಗ ನ್ಯೂನ್ಯತೆ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ನಾನು ಡಿಎಲ್ ಇಲ್ಲದೇ ಮತ್ತು ವಿಮೆ ಇಲ್ಲದ ಮೋಟರ ಸೈಕಲ ಓಡಿಸಿದ್ದರಿಂದ ನನ್ನ ತಪ್ಪಿನಿಂದ ಅಪಘಾತ ಆಗಿದ್ದರೂ ಸಹ ಪರಿಹಾರ ಹಣ ಸಿಗಲಿ ಅಂತಾ ಸುಳ್ಳು ಸಾಕ್ಷಿ ಹೇಳುತಿತದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ಪಾಲಿಸಿ ಖೊಟ್ಟಿ ಇರುವುದರಿಂದ 2 ನೇ ಎದುರುದಾರ ವಿಮಾ ಕಂಪನಿ ನಾನು ಕೇಳಿರುವಂತೆ ಪರಿಹಾರ ಹಣ ಕೊಡಲು ಬಾಧ್ಯಸ್ತ ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.
(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಬೈಲಹೊಂಗಲ.